

ನಾನೂ ಲಾಭದಾಗ ಇರ್ತೀನಿ ಅಂತ ದೂರದ ವಿಜಾಪುರದಿಂದ ಹೊತಗೊಂಡು ತಂದ್ರ ಇಲ್ಲಿ ಮಂದಿಗೆ ತಿಳಿಯೂದು ಬ್ಯಾಡ!? ಮನೂಕದ ಕಿಮ್ಮತ್ತ ಗೊತ್ತಿಲ್ಲ ಇಲ್ಲಿಯವ್ರಿಗೆ ಅಂತ ಗಂಡನ ಎದುರು ವಟಗುಟ್ಟೂದ ಆಗಿತ್ತು ದಿನಾ ಮುಂಜಾಳೆ ಸಂಜೀಕ. ಎಂಥಾ ದಡ್ಡರು ಅಂತ ನಗಾಕತ್ತೀರಿ ಅಲ್ಲಾ ನೀವು? ಖರೇ ಐತಿ ಎಲ್ಲಾರಿಗೂ ಎಲ್ಲಾ ವಿದ್ಯೇನೂ ಒಲಿಯಂಗಿದ್ರ ಹಿಂಗ್ಯಾಕಿರ್ತಿತ್ತು ಈ ಲೋಕ. ಅದೇನೋ ಅಂತಾರಲ್ಲ ಕುಣ್ಯಾಕ ಬರದಾಕಿ, ನೆಲಾ ಡೊಂಕು ಅಂದ್ಲಂತ, ಹಂಗ ನಾನು, ಇಲ್ಲಿ ಮಂದಿಗೆ ಮನೂಕದ ಕಿಮ್ಮತ್ತ ಗೊತ್ತಿಲ್ಲ ಅನಕೋತ, ಯಾರ ಕಡೆ ತೊಗೊಂಡಿದ್ನೋ ಅವ್ರಿಗೆ ಯಪ್ಪಾ ಎಣ್ಣಾ ಅಂದು, ವಾಪಸ್ ಕೊಟ್ಟು ಕೈ ತೊಳ್ಕೊಂಡಿದ್ದೆ. ಈಗ ಮನಿಗೆ ಮನೂಕ ಕೊಂಡಾಗೊಮ್ಮೆ, ವ್ಯಾಪಾರದಾಗಿರೊ ನನ್ನ ಅದ್ಭುತ ಜ್ಞಾನ ನೆನಪಾಗಿ ನಗು ಬರ್ತತಿ.

*

ಅಕ್ಕಾ ಅಕ್ಕಾ ಬಳ್ಳಿ ನೋಡ
ಬಳ್ಳಿ ತುಂಬ ಗಿಣಿ ನೋಡ
ತಿಂದೋರ ಬಾಯಿ ನೋಡ!

ಹಿಂಗಂದ್ರ ಏನ್ ಹೇಳ್ರಿ ನೋಡೂನು? ಗೊತ್ತಾತು? ಇಲ್ಲಾ? ನಾ ಹೇಳ್ಲಿ? ನನಗೊತ್ತು, ಯಾರೋ ನೀಲದಹಣ್ಣು (ನೇರಳೆ ಹಣ್ಣು) ಅಂತೀರಿ, ಇನ್ಯಾರೋ ಯಾಲಕ್ಕಿ ಅನ್ನೋತೀರಿ. ಆದರ ಎರಡೂ ಅಲ್ಲ! ನೀಲದಹಣ್ಣು ಮರದಾಗ ಬೆಳಿತೈತಿ ಬಳ್ಳ್ಯಾಗಲ್ಲ. ಯಾಲಕ್ಕಿ ಬಳ್ಳ್ಯಾಗ ಬಿಡತಾವ ಖರೆ, ಆದ್ರ ತಿಂದೋರ್ ಬಾಯಿ ನೋಡಿದ್ರ ಬಣ್ಣ ಕಾಣ್ಸೈತೇನ್ರಿ. ಇಲ್ಲಲಾ? ಹಂಗಾರ ಏನ್ ಇದು? ಏನಂದ್ರ ಕೂಡಗಿ ಎಲಿ ರೀ, ವಿಳ್ಯದೆಲಿ, ಪಾನ್! ಅಮಿತಾಬ್ ಬಚ್ಚನ್ ಹಾಡಿದ್ 'ಖೈಕೆ ಪಾನ್ ಬನಾರಸವಾಲಾ, ಖುಲ್ ಜಾಯೆ ಬಂದ್ ಅಕಲ್ ಕಾ ತಾಲಾ' ಹಾಡಾ ನೆನಪಾತೇನು ನಿಮಗ? ಆದ್ರ ಈ ವಿಳ್ಯದೆಲಿ ಏನೈತಿ ಅದು ನಮ್ಮ ವಿಜಯಪುರ ಜಿಲ್ಲಾದ್ದು, ಬಸವನಬಾಗೇವಾಡಿ ತಾಲ್ಲೂಕಿನ್ಯಾಗಿರೊ ಕೂಡಗಿ ಅನ್ನೋ ಒಂದು ಊರಾಗ ಬೆಳಿತಾರ. ನಾವು ಸಣ್ಣೋರಿದ್ದಾಗ ಅಲ್ಲಿ ಯಾರ ತ್ವಾಟ ನೋಡಿದ್ರೂ ಉದ್ದೂದ್ದನ ಮರಕ್ಕೋ ಇಲ್ಲಾ ಕಟಗಿ ತುಂಡಿಗೋ ಹಬ್ಬಿ, ಮೈತುಂಬಾ ಗಿಳಿ ಹಸರು ಬಣ್ಣದ ಎಲಿ ಹೊತ್ತ ಬಳ್ಳಿ ಕಾಣ್ತಿದ್ವು. ಅವುನ್ನ ನಮ್ಮಡೆ ಬಿಳಿ ಎಲಿ ಅಂತೀವಿ. ಖಾರ ಇಲ್ಲದ ಎಲಿ ಇವು. ಎರಡೆರೆಡು ಹಂಗs ತಿಂದ್ರೂ ನಾಲ್ಗಿ ಸುಡಂಗಿಲ್ಲ. ಅದs ಕರಿ ಎಲಿ, ಅಂದ್ರ ಗಾಢ ಹಸರು ಬಣ್ಣದ ಎಲಿ ನೋಡ್ರಿ, ಸುಣ್ಣಾ ಹಚ್ಚದನ ಒಂದs ಎಲಿ ಬಾಯಿಗಿಟ್ರೂ, ಬಾಯಿ ಭಗಾಭಗಾ ಅಂತೈತಿ. ಆರತಿ ಕಳಸಕ್ಕ, ಪೂಜಾ ಕಳಸಕ್ಕ, ಪೂಜಾಕ್ಕ, ಮದವಿ ಅನ್ನಿ, ಮುಂಜ್ವಿ ಅನ್ನಿ, ದೇವ್ರಿಗೆ ಎಲಿ ಪೂಜಿ, ಇಲ್ಲಾ ತೇರಿನ ಅಲಂಕಾರೋ ಎಲ್ಲಾ ಕಡೆ ಕೂಡಗಿ ಎಲಿ ಇದ್ದ್ರ ಅವುಕ್ರ ಕಳಿನೇ ಬ್ಯಾರೇ ಇರ್ತತಿ. ಮಕ್ಕಳಿಗೆ ನೆಗಡಿ ಕೆಮ್ಮು ಹತ್ತಿ ಕಫಾ ಕಟಗೊಂಡ್ರ, ವಿಳ್ಯದೆಲಿನ, ಹಂಚಿನ ಮ್ಯಾಲೆ ತುಸು ಬೆಚ್ಚಗ ಮಾಡಿ, ಶಾಖದ ಹದಾ ಹಿತ ನೋಡಿ, ಕೂಸಿನ ಎದಿ ಮ್ಯಾಲಿಟ್ಟು ದುಬಟಿ ಹೊಚ್ಚಿ ಮಲಗಿಸಿದ್ರಾತು, ಎರಡ್ ದಿನದಾಗ ಕೂಸು ನಿಚ್ಚಳ ಆಕ್ಕತಿ. ಕೂಸಗೊಳ ಹೊಟ್ಟಿ ನೋವಿಗೂ ಹಿಂಗ ಮಾಡಬೇಕು. ಆದ್ರ ಎಲಿ ಇಡೂ ಮೊದ್ಲು ಅಜಿವಾನ ತಿಂದು ಕೂಸಿನ ಹೊಕ್ಕಳಕ ಅದರ ಗಾಳಿ ಊದಿ, ಆಮ್ಯಾಲೆ ಬೆಚ್ಚಗನ ಎಲಿ ಇಡ್ತಾರ. ಜೀರ್ಣಶಕ್ತಿ ಹೆಚ್ಚಾಕ ಬಾಣತ್ಯಾರಿಗಂತೂ ಊಟದ ನಂತ್ರ ಸುಣ್ಣಾ ಹಚ್ಚಿದ ಎಲಿ ತಿನ್ನೂದು ಕಂಪಲ್ಸರಿ. ಇನ್ನ ಮನ್ಯಾಗ ಏನರೇ ಕಾರ್ಯ ನಡದ್ರ ತಾಂಬೂಲ ಇಲ್ದಿದ್ರ ಊಟ ಮುಗದಂಗ ಅನ್ನೂದ ಇಲ್ಲ ಅಲ್ಲಾ? ಇಂಥಾ ಬಹೂಪಯೋಗಿ, ನಾಜೂಕಿನ ಬಿಳಿ ವಿಳ್ಯದೆಲಿ ಆಗೆಲ್ಲಾ ಕೂಡಗಿಯಿಂದ ಎಲ್ಲಾ ಕಡೆ ಪೆಂಡಿ ಪೆಂಡಿ ಲಾರಿಗಟ್ಲೆ ಸಪ್ಲೈ ಆಕ್ಕಿದ್ವು. ಮನಗಂಡ ಡಿಮಾಂಡಿತ್ತು. ಆದ್ರ, ಈಗಲ್ಲಿ ಥರ್ಮಲ್ ಪವರ್ ಸ್ಟೇಶನ್ ಬಂದು ಎಲಿ ಬೆಳಿಯೂದು ಕಮ್ಮಿ ಆಗೇತಿ. ಎಲ್ಲೋ ಅಲ್ಲೊಂದು ಇಲ್ಲೊಂದ್ ತ್ವಾಟ ಅದಾವಷ್ಟ.

*

ಅದೊಂದು ಸಾಹಿತ್ಯದ ಸಮಾರಂಭ. ಓದುಗರ ಚಾವಡಿ ಅಂತ ವಿಜಯಪುರದಾಗ. ಹೆಸರ ಹೇಳೂವಂಗ, ಓದುಗರದ್ದೊಂದು ಬಳಗ ಅದು. ಅವ್ರು ಪುಸ್ತಕ್ ಬಿಡುಗಡೆ ಕಾರ್ಯಕ್ರಮಕ್ಕಂತ, 2022ರ ಅಕ್ಟೋಬರದಾಗ ನನ್ನನ್ನ ಕರ್ದಿದ್ರು. ನಾ ಬೆಂಗಳೂರಿಂದ ಹೋಗಿದ್ದೆ. ಅವತ್ತ ಸಿದ್ದೇಶ್ವರ ಅಪ್ಪಗೊಳ ಜೊತಿಗೆ ವೇದಿಕಿ ಮ್ಯಾಲಿರೊ ಭಾಗ್ಯ ನಂದು. ಆದ್ರ ಅದs ನನಗ ಅವ್ರ ಕಡೀ ದರ್ಶನ ಅಂತ ಗೊತ್ತಿರ್ಲಿಲ್ಲ ಆರಾಮ್ ತಪ್ಪಿ ತುಸು ಮೆತ್ತಗಾಗಿದ್ರು. ಅವತ್ತು, 'ನಾ ಮಾತಾಡೂದಿಲ್ಲ, ಸುಮ್ನ ಕುಂಡ್ರತೀನಿ, ನೀವು ನಿಮ್ಮ ಕಾರ್ಯಕ್ರಮ ಮಾಡ್ಕೋರಿ' ಅಂತಂದು ಮೌನಕ್ಕ ಶರಣಾಗಿದ್ರು. ಇಡೀ ಬದುಕನ್ನ ನುಡದಂಗ ನಡದೋರು. ಇದ್ದಲ್ಲೆಲ್ಲ ಸುತ್ತಲ ಪ್ರಪಂಚಕ್ಕ ಶ್ರೀಮಂತ್ರು ಬಡೂರು, ಮೇಲುಕೀಳು, ಹೆಣ್ಣುಗಂಡು ಅನ್ನದನs ಜ್ಞಾನದ ಬೆಳಕು ಹಂಚಿದ ಸಂತ ಶರಣ್ರು ಅವ್ರು. ಜ್ಞಾನ ದಾಸೋಹ ಅದು!

ನಾನು ಮತ್ತ ನಮ್ಮನಿಯವ್ರು ಮದ್ಲೆ ಸತಿ ಅವ್ರ ದರ್ಶನಕ್ಕಂತ ಆಶ್ರಾಮಕ್ಕ ಹೋದಾಗ ಬಾಯ್ತುಂಬಾ ಮಾತಾಡಿ, ನಮ್ಮ ವಿವರ ಎಲ್ಲಾ ಕೇಳಿ ಆಶೀರ್ವಾದ ಮಾಡಿದ್ದಲ್ದ, ಉಂಡು ಹೋಗ್ರಿ ಹಂಗ ಹೋಗಬ್ಯಾಡ್ರಿ ಅಂತಂದು, ನಮ್ಮನ್ನ ಸೀದಾ ದಾಸೋಹದ ಮನಿಗೆ ಕಳಿಸಿದ್ರು. ಅಲ್ಲಿ ಗಂಗಾಳ ಎದ್ರಿಗಿಟ್ಕೊಂಡು ನಾವಿಬ್ರೂ ಸಂಕೋಚ ಪಟ್ಕೋತ ಕುಂತೀವಿ, ಊಟ ನೀಡಾಕ ಸ್ವತಃ ಅಪ್ಪಗೊಳು ಬರಬೇಕಾ! ನಾವು ಗಂಡಾಹೆಂಡ್ತಿ ಇಬ್ರೂ ಮಾರಿ ಮಾರಿ ನೋಡ್ಕೊಳ್ಳಾಕತ್ವಿ. ನಾವು ಕುಂತು, ಅವ್ರು ನಮಗ ಊಟಕ್ಕ ನೀಡೂದು ಎಷ್ಟ್ ಸರಿ ಅನ್ನೂ ಗೊಂದಲಾ ನಮ್ಮಿಬ್ರಿಗೂ. ಮೈಯೆಲ್ಲಾ ಹಿಡಿ ಮಾಡ್ಕೊಂಡು ಸಿದ್ದೇಶ್ವರ ಅಪ್ಪಗೊಳಿಗೆ ಅದನ್ನ ಅಂದೂಬಿಟ್ವಿ. ಅಂದು ಕುಂತಲ್ಲಿಂದ ಎದ್ದು ನಿಂತ್ವಿ, ಅಪ್ಪಗೊಳ ಆಜ್ಞೆ ಆತು, 'ಸುಮ್ನ ಕುಂಡರ್ರಿ. ಕುಂತು ಹೊಟ್ಟಿತುಂಬಾ ಉಣ್ರಿ' ಅಂತ. ಗಂಗಾಳ ತುಂಬಾ

## ಪ್ರಾದೇಶಿಕ ಪದಗಳ ಅರ್ಥ

- ಒಂದು ಡಾಗ: 1200 ನಿಂಬೆಹಣ್ಣುಗಳ ಮೂಟೆ
- ಅಡತ್ (ಅಡತಿಗೆ ಹೋಗಿ): ತರಕಾರಿ ಮಂಡಿ
- ಮಣೂಕ: ಒಣದ್ರಾಕ್ಷಿ
- ಗಂಗಾಳ: ಊಟದ ತಟ್ಟೆ

ಕಳೆದ ವಾರದ 'ಚೆನ್ನುಡಿ' 'ಕಾಲಚಕ್ರಕ್ಕೇ ರೆಸ್ಟ್ ಕೊಟ್ಟಬಿಡ್ತಿದ್ದೆ' ಕೇಳಿ ಸಂಧ್ಯಾ ಹೊನಗುಂಟಿಕರ್ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

